25/12/2016 ವಿಜಯ ಕರ್ನಾಟಕ ಪ್ರಿನ- IV

### ಮೊಬೈಲ್ ಚಾರ್ಜ್‌ಗೆ ಇಟ್ಟು ವಿಡಿಯೊ ನೋಡುತ್ತಿದ್ದಾಗ ದುರಂತ

# ಮೊಬೈಲ್ ವಿದ್ಯುತ್ ಶಾಕ್‌ಗೆ ಟೆಕ್ಕಿ ಬಲಿ

■ **ವಿಕ ಸುದ್ದಿಲೋಕ** ಬೆಂಗಳೂರು

ಮೊಬೈಲ್ ಫೋನ್ ಚಾರ್ಜ್‌ಗೆ ಹಾಕಿ ಬೆಡ್ ಮೇಲೆ ಮಲಗಿ ವಿಡಿಯೋ ನೋಡುತ್ತಿದ್ದ ವೇಳೆ ವಿದ್ಯುತ್ ಶಾಕ್ ಹೊಡೆದು ಸಾಫ್ಟ್‌ವೇರ್ ಎಂಜಿನಿಯರ್ ಮೃತಪಟ್ಟಿರುವ ಘಟನೆ ಬನ್ನೇರುಘಟ್ಟ ರಸ್ತೆ ಬಿಳೇಕಹಳ್ಳಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಮಧ್ಯಪ್ರದೇಶದ ಭೋಪಾಲ್ ಮೂಲದ ಶೈಲೇಂದ್ರ ರಘುವಂಶಿ(31) ಮೃತರು. ಅಪಾರ್ಟ್‌ಮೆಂಟ್‌ನಲ್ಲಿ ಪತ್ನಿಯೊಂದಿಗೆ ನೆಲೆಸಿದ್ದ ಶೈಲೇಂದ್ರ, ಗ್ಲೋಬಲ್ ವಿಲೇಜ್‌ನಲ್ಲಿರುವ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು.



ಶುಕ್ರವಾರ ರಾತ್ರಿ ಊಟ ಮಾಡಿದ ಬಳಿಕ ಶೈಲೇಂದ್ರ, ಸ್ಯಾಮ್‌ಸಂಗ್ ಕಂಪನಿಯ ಮೊಬೈಲನ್ನು ಚಾರ್ಜ್‌ಗೆ ಇಟ್ಟು ಕಿವಿಗೆ ಇಯರ್ ಫೋನ್ ಹಾಕಿಕೊಂಡು ಬೆಡ್ ಮೇಲೆ ಮಲಗಿ ವಿಡಿಯೋ ನೋಡುತ್ತಿದ್ದರು. 11.30ರ ಸುಮಾರಿಗೆ ಏಕಾಏಕಿ ಜೋರಾಗಿ ಕೂಗಿಕೊಂಡಿದ್ದಾರೆ. ಹಾಲ್‌ನಲ್ಲಿ ಇದ್ದ ಪತ್ನಿ ಹಾಗೂ ನಾದಿನಿ ಕೂಗಾಟ ಕೇಳಿ ಕೊಠಡಿಗೆ ಓಡಿದ್ದಾರೆ. ಶೈಲೇಂದ್ರ ಪ್ರಜ್ಞೆ ತಪ್ಪಿ ಬಿದ್ದಿದ್ದರು. ಬಳಿಕ ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಪರಿಸ್ಥಿತಿ ಗಂಭೀರವಿದೆ ಎಂದು ಅಲ್ಲಿನ ವೈದ್ಯರು ಹೇಳಿದ ಕಾರಣ ತಿಲಕ ನಗರದಲ್ಲಿರುವ ಸಾಗರ್ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಅಷ್ಟು ಹೊತ್ತಿಗಾಗಲೇ ಮೃತಪಟ್ಟಿದ್ದಾರೆ.

**ಬೆಸ್ಕಾಂನಿಂದ ತಪಾಸಣೆ:** ವಿದ್ಯುತ್ ಅವಘಡ ಸಂಭವಿಸಿ ಅಸಹಜ ಸಾವು ಹಿನ್ನೆಲೆಯಲ್ಲಿ ಬೆಸ್ಕಾಂನ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿತ್ತು. ಅಧಿಕಾರಿಗಳ ತಂಡ ಮನೆಗೆ ಆಗಮಿಸಿ ಚಾರ್ಜಿಂಗ್ ಸಾಕೆಟ್, ಚಾರ್ಜರ್ ವೈರ್, ಅಡಾಪ್ಟರ್, ಮನೆಯ ವಿದ್ಯುತ್ ಸಂಪರ್ಕದ ಕುರಿತು ಸಂಪೂರ್ಣ ಪರಿಶೀಲನೆ ನಡೆಸಿದ್ದಾರೆ. ಬೆಸ್ಕಾಂ ಅಧಿಕಾರಿಗಳಿಂದ ವರದಿ ಬರಬೇಕಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಶವ ಪರೀಕ್ಷೆ ಬಳಿಕ ನಿಖರ ಮಾಹಿತಿ

ವಿದ್ಯುತ್ ಶಾಕ್‌ನಿಂದ ಸಾವು ಸಂಭವಿಸಿದೆ ಎಂದು ಪ್ರಾಥಮಿಕ ವೈದ್ಯಕೀಯ ಪರಿಶೀಲನೆ ವೇಳೆ ಗೊತ್ತಾಗಿದೆ ತಪಾಸಣೆ ನಡೆಸಿರುವ ವೈದ್ಯರು ತಿಳಿಸಿದ್ದಾರೆ. ಆದರೆ, ಶೈಲೇಂದ್ರ ಮೈ ಮೇಲೆ ಯಾವುದೇ ಸುಟ್ಟ ಗಾಯಗಳು ಕಂಡು ಬಂದಿಲ್ಲ, ಹೀಗಾಗಿ, ಭಾನುವಾರ ಶವ ಪರೀಕ್ಷೆ ನಡೆಸಲಾಗುತ್ತದೆ. ವರದಿ ಬಂದ ನಂತರ ಸಾವಿಗೆ ನಿಖರ ಕಾರಣ ಗೊತ್ತಾಗಲಿದೆ ಎಂದು ಮೈಕೋ ಲೇಔಟ್ ಪೊಲೀಸರು ತಿಳಿಸಿದ್ದಾರೆ.

## ಸುಟ್ಟು ಹೋದ ಚಾರ್ಜರ್ ವೈರ್

ಸ್ಯಾಮ್‌ಸಂಗ್ ಮೊಬೈಲ್ ಫೋನ್ ಯಾವ ಸರಣಿಯದ್ದು ಎಂದು ಗೊತ್ತಾಗಿಲ್ಲ, ಅದರ ಪೌಚ್ ಮಾತ್ರ ದೊರೆತಿದೆ, ಮೊಬೈಲ್ ಇನ್ನೂ ಸ್ನೇಹಿತರ ಬಳಿ ಇದ್ದು, ಅದನ್ನು ತಂದು ಕೊಡುವಂತೆ ತಿಳಿಸಲಾಗಿದೆ. ಮನೆಯಲ್ಲಿ ಪರಿಶೀಲನೆ ನಡೆಸಿದಾಗ ಚಾರ್ಜಿಂಗ್ ವೈರ್ ಸುಟ್ಟು ಹೋಗಿರುವುದು ಕಂಡು ಬಂದಿದೆ. ವೈರ್ ಹಾಗೂ ಅಡಾಪ್ಟರ್ ಪ್ರತ್ಯೇಕವಾಗಿವೆ ಎಂದು ಪೊಲೀಸರು ಹೇಳಿದ್ದಾರೆ.

---

25-12-2016, ಕನ್ನಡಪ್ರಭ, Pg (3)

# ಎಂ ಜಿ ರಸ್ತೆಯಲ್ಲಿ ಲೈಟ್ ಆಫ್ ಇಲ್ಲ

### 10 ಸೆಕೆಂಡ್ ವಿದ್ಯುತ್ ಕಡಿತ ಮಾಡಿ ಹೊಸವರ್ಷ ಸ್ವಾಗತಿಸುವ ಪರಂಪರೆಗೆ ಬ್ರೇಕ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದಾರೆ. ಜತೆಗೆ ಡಿ.31ರ ತಡ ರಾತ್ರಿ 2 ಗಂಟೆವರೆಗೆ ಹೋಟೆಲ್ ಸೇರಿದಂತೆ ಪಬ್ ರೆಸ್ಟೋರೆಂಟ್‌ಗಳನ್ನು ತೆರೆಯಲು ಮತ್ತು ಆಹಾರ ಪದಾರ್ಥ ಮಾರಾಟಕ್ಕೆ ಅವಕಾಶ ಕಲ್ಪಿಸಿ ನಗರ ಪೊಲೀಸ್ ಆಯುಕ್ತ ಮೇಘರಿಕ್ ಆದೇಶಿಸಿದ್ದಾರೆ.

ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ ಸೇರಿದಂತೆ ಪ್ರಮುಖ ಸಂಭ್ರಮಾಚರಣೆ ಸ್ಥಳಗಳಲ್ಲಿ ಮಧ್ಯಾಹ್ನ 12ಗಂಟೆಗೂ ಮುನ್ನ 10 ಸೆಕೆಂಡ್‌ಗಳ ಕಾಲ ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ಸರಿಯಾಗಿ 12ಗಂಟೆಗೆ ವಿದ್ಯುತ್ ದೀಪ ಬೆಳಗಿಸುವ ಮೂಲಕ ಹೊಸ ವರ್ಷವನ್ನು ಸ್ವಾಗತಿಸುವ ಆಚರಣೆ ನಡೆಯುತ್ತದೆ. ಈ ಬಾರಿ ಇದಕ್ಕೆ ಬ್ರೇಕ್ ಹಾಕಿರುವ ಪೊಲೀಸರು ಯಾವುದೇ ಕಾರಣಕ್ಕೂ ವಿದ್ಯುತ್ ಕಡಿತ ಮಾಡುವಂತಿಲ್ಲ, ಆ ಸಮಯದಲ್ಲೇ ದುಷ್ಕರ್ಮಿಗಳು ಯುವತಿಯರಿಗೆ ಲೈಂಗಿಕ ಕಿರುಕುಳ ನೀಡುವುದು ಮತ್ತು ಬಾಟಲ್ ಬಿಸಾಕಿ ಅಸಭ್ಯವಾಗಿ ವರ್ತಿಸುವ ಪ್ರಕರಣಗಳು ದಾಖಲಾಗುತ್ತಿರುವ ಹಿನ್ನೆಲೆಯಲ್ಲಿ ಇದನ್ನು ನಿಷೇಧಿಸಲಾಗಿದೆ. ಒಂದು ವೇಳೆ ಆದೇಶ ಉಲ್ಲಂಘಿಸಿ ವಿದ್ಯುತ್ ಕಡಿತ ಮಾಡಿದರೆ, ಅಂತಹವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ವಿರುದ್ಧ ಪ್ರಕರಣ ದಾಖಲಿಸಲು ಎಲ್ಲಾ ಸಂಚಾರಿ ಪೊಲೀಸರು ಆ ದಿನ ರಾತ್ರಿ ಕರ್ತವ್ಯ ನಿರ್ವಹಿಸಲಿದ್ದಾರೆ. ತಡರಾತ್ರಿ 2 ಗಂಟೆವರೆಗೂ ಸಂಚಾರಿ ಪೊಲೀಸರು ವಾಹನ ತಪಾಸಣೆ ನಡೆಸಲಿದ್ದಾರೆ. ಬಂದೋಬಸ್ತ್‌ಗೆ ನಗರದ ಎಲ್ಲಾ ಠಾಣೆಗಳ ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ಯಾವುದೇ ಅಕ್ರಮ ಚಟುವಟಿಕೆ ಮತ್ತು ಪುಂಡಾಟಿಕೆಗೆ ಅವಕಾಶ ನೀಡುವುದಿಲ್ಲ. ತುರ್ತು ಸಂದರ್ಭದಲ್ಲಿ ಸಾರ್ವಜನಿಕರು ಪೊಲೀಸ್ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಬಹುದು ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

## ಕ್ರಿಸ್‌ಮಸ್‌ಗಾಗಿ ನಮ್ಮ ಮೆಟ್ರೋ ಅವಧಿ ವಿಸ್ತರಣೆ

ಬೆಂಗಳೂರು: ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಹಿನ್ನೆಲೆಯಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ನಮ್ಮ ಮೆಟ್ರೋ ರೈಲು ಸಂಚಾರ ಅವಧಿಯನ್ನು ಬಿಎಂಆರ್‌ಸಿಎಲ್ ವಿಸ್ತರಿಸಿದೆ.

ಕ್ರಿಸ್‌ಮಸ್ ದಿನವಾದ ಭಾನುವಾರದಿಂದ ಡಿ.30ರವರೆಗೆ ಮೆಟ್ರೋ ರೈಲು ಮಧ್ಯರಾತ್ರಿ 1ಗಂಟೆಯವರೆಗೆ ಹಾಗೂ ಡಿ.31 ಹಾಗೂ ಜ. 1ರಂದು ಮಧ್ಯರಾತ್ರಿ 2 ಗಂಟೆವರೆಗೆ ಮೆಟ್ರೋ ಸೇವೆ ವಿಸ್ತರಿಸಲಾಗಿದೆ. ವಿಸ್ತರಣೆ ಅವಧಿಯಲ್ಲಿ ಪ್ರತಿ 30 ನಿಮಿಷಕ್ಕೊಮ್ಮೆ ನಮ್ಮ ಮೆಟ್ರೋ ಸಂಚರಿಸಲಿದೆ. ನಾಯಂಡಹಳ್ಳಿಯಿಂದ ಬೈಯಪ್ಪನಹಳ್ಳಿ ಹಾಗೂ ಸಂಪಿಗೆ ರಸ್ತೆಯಿಂದ ನಾಗಸಂದ್ರದವರೆಗೆ ಮೆಟ್ರೋ ರೈಲುಗಳು ಸಂಚರಿಸಲಿದ್ದು, ರಾತ್ರಿ 10.50ರ ನಂತರ ಅರ್ಧಗಂಟೆಗೊಂದು ರೈಲು ಸಂಚರಿಸಲಿವೆ. ಮೆಟ್ರೋ ಅವಧಿ ವಿಸ್ತರಣೆಯಿಂದಾಗಿ ಸಾರ್ವಜನಿಕರಿಗೆ ಅನುಕೂಲವಾಗಿದೆ. ಕಬ್ಬನ್ ಉದ್ಯಾನ ಹಾಗೂ ಹೈಕೋರ್ಟ್ ಸಮೀಪದ 'ಡಿ' ಪ್ರವೇಶ ದ್ವಾರವನ್ನು ಜನವರಿ 16ರವರೆಗೆ ಮುಚ್ಚಲು ಬಿಎಂಆರ್‌ಸಿಎಲ್ ತೀರ್ಮಾನಿಸಿದೆ. ದಿನೇ ದಿನೇ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಅವರಿಗೆ ಎಸ್ಕಲೇಟರ್, ಆಸನಗಳು ಸೇರಿದಂತೆ ಹಲವು ಅಗತ್ಯ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಹೀಗಾಗಿ ಡಿ.26ರಿಂದ ಜನವರಿ 16ರವರೆಗೆ 'ಡಿ' ಪ್ರವೇಶವನ್ನು ಮುಚ್ಚಲಾಗುವುದು ಎಂದು ಬಿಎಂಆರ್‌ಸಿಎಲ್ ಪ್ರಕಟಣೆಯಲ್ಲಿ ತಿಳಿಸಿದೆ.

